ಸಾಕ್ಷಿಯನ್ನು ಪುನಃ ದಿನಾಂಕಃ14.07.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಆಸ್ತಿ ವಿಚಾರವಾಗಿ ಮೇಲೆ ಹೇಳಿದಂತೆ ಘಟನೆ ನಡೆದಿರುತ್ತದೆ.

ಪಾಟೀ ಸವಾಲುಃ ನೇ ಆರೋಪಿ ಪರ ಶ್ರೀ ಎಂ.ಬಿ.ಆರ್. ವಕೀಲರಿಂದಃ

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ತಂದೆಯ ಊರು ಮಾರಗೋಡನಹಳ್ಳಿ. ಮಾರಗೋಡನಹಳ್ಳಿ ಯಿಂದ ಹೊಸಕೊಪ್ಪಲು ಸಮಾರು 15 ಕಿ.ಮೀ. ದೂರವಾಗುತ್ತದೆ. ಹೊಸಕೊಪ್ಪಲಿನಲ್ಲಿ ನನಗೆ ಅಥವಾ ನನ್ನ ತಂದೆ ತಾಯಿಗೆ ಯಾವುದೇ ಆಸ್ತಿ ಇರುವುದಿಲ್ಲ. 4 ನೇ ಆರೋಪಿ ಏನು ಕೆಲಸ ಮಾಡುತ್ತಾನೆ ಗೊತ್ತಿಲ್ಲ, ಆತ ಬೆಂಗಳೂರಿನಲ್ಲಿ ವಾಸಮಾಡಿಕೊಂಡಿರುತ್ತಾನೆ. ಎಷ್ಟು ವರ್ಷಗಳಿಂದ ಬೆಂಗಳೂರಿನಲ್ಲಿ ಇದ್ದಾನೆ ಗೊತ್ತಿಲ್ಲ. 5 ನೇ ಆರೋಪಿ ಸಹ ಬೆಂಗಳೂರಿನಲ್ಲಿ ವಾಸಮಾಡಿಕೊಂಡಿರುತ್ತಾರೆ. ಊರಿನಲ್ಲಿ 1 ಮತ್ತು 2 ನೇ ಆರೋಪಿ ಖಾಯಂ ವಾಸವಾಗಿದ್ದರೆ ಎಂದರೆ ಸರಿ. 3 ನೇ ಆರೋಪಿ ಹೊಸಕೊಪ್ಪಲಿನಲ್ಲಿ ವಾಸಮಾಡಿಕೊಂಡಿರುತ್ತಾರೆ. ಅವರ ಮನೆ ಹಾಗೂ 1 ಮತ್ತು 2 ನೇ ಆರೋಪಿಗಳ ಮನೆ ಬೇರೆ ಬೇರೆ ಎಂದರೆ ಸರಿ.

2. ನಮ್ಮ ತಾತ ಚಿಕ್ಕವರದೇಗೌಡ, ಬುಡ್ಡೇಗೌಡ ಮತ್ತು ಬೆಟ್ಟೇಗೌಡರವರ ಮಧ್ಯೆ ಅವರ ಹಿಸ್ಸೆಗೆ ಇರುವ ಸ್ವತ್ತು ವಿಭಾಗವಾಗಿರುತ್ತದೆ. ಆಸ್ತಿಗೆ ಸಂಬಂಧಪಟ್ಟ ಖಾತೆ ಚಿಕ್ಕವರದೇಗೌಡ ರವರ ಹೆಸರಿನಲ್ಲಿರುತ್ತದೆ. 3 ನೇ ಆರೋಪಿ ಹೊಸ ಮನೆ 2019 ನೇ ಸಾಲಿನಲ್ಲಿ ಕಟ್ಟಿದ್ದರು ಅಂದರೆ ಗಲಾಟೆ ನಡೆಯುವ ಪೂರ್ವದಲ್ಲಿ ಕಟ್ಟಿದ್ದರು. ಆರ್.ಸಿ.ಸಿ. ಮನೆ ಕಟ್ಟುವ ಪೂರ್ವದಲ್ಲಿ ಸದರಿ ಜಾಗದಲ್ಲಿ ಗುಡಿಸಲು ಮನೆ ಇತ್ತು ಎಂದರೆ ಸರಿ. ಆ ಮನೆಯ ಖಾತೆಯೂ ಸಹ ನಮ್ಮ ತಾತ ಚಿಕ್ಕವರದೇಗೌಡ ರವರ ಹೆಸರಿನಲ್ಲಿತ್ತು. ಮನೆ ಕೆಡವಿ ಹೊಸ ಮನೆ ಕಟ್ಟುವ ಸಂದರ್ಭದಲ್ಲಿಯೂ ಸಹ ನಮ್ಮ ತಾತ ಹಾಗೂ ಬುಡ್ಡೇಗೌಡ ಮಧ್ಯೆ ಗಲಾಟೆ ಆಗಿತ್ತು ಎಂದರೆ ಸರಿಯಲ್ಲ. ಆ ಸಂದರ್ಬಥದಲ್ಲಿ ಬುಡ್ಡೇಗೌಡ ತನ್ನ ಹೆಸರಿಗೆ ಸಹಿ ಮಾಡಿ ಖಾತೆ ಮಾಡಿಕೊಡಿ ಎಂದು ಚಿಕ್ಕವರದೇಗೌಡ ರವರಿಗೆ ಕೇಳಿದ್ದರು ಎಂದರೆ ಸರಿ. ಆಗ ನನ್ನ ತಾತ ಒಪ್ಪಿರಲಿಲ್ಲ ಎಂದರೆಸರಿಯಲ್ಲ. ಸಾಕ್ಷಿ ಇನ್ನೊಬ್ಬರ

ಮೂಗೇಗೌಡ ರವರ ಮಕ್ಕಳಾದ ನಾಗೇಶ ಮತ್ತು ಕುಮಾರ ಹೆಸರು ಕೈಬಿಟ್ಟಿದ್ದು, ಆದ ಕಾರಣ ಅವರ ಮಕ್ಕಳು ಸಹಿ ಮಾಡಲ್ಲ ಎಂದು ತಕರಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3. ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಗ್ರಾಮದಲ್ಲಿ ನ್ಯಾಯ ಪಂಚಾಯಿತಿ ನಡೆಯಿತು ಎಂದರೆ ಸರಿ. ಪಂಚಾಯಿತಿ ತೀರ್ಮಾನದ ಪ್ರಕಾರ ಮನೆಯ ಖಾತೆ 2 ನೇ ಆರೋಪಿಯ ಹೆಸರಿಗೆ ಆಯಿತು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಾತ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ನಂತರ 2 ನೇ ಆರೋಪಿ ಪಂಚಾಯಿತಿಯಿಂದ ಗ್ರಾಂಟ್ ಪಡೆದು ಮನೆ ಕಟ್ಟಿರುತ್ತಾರೆ ಎಂದರೆ ಹೇಗೆ ಪಡೆದರು ಎಂದು ಗೊತ್ತಿಲ್ಲ.

4. ಯಾವ ತಾರೀಖಿನಿಂದ ಯಾವ ತಾರೀಖು ವರೆಗೆ ನನ್ನ ಕೈಗೆ ಬ್ಯಾಂಡೇಜ್ ಹಾಕಲಾಗಿತ್ತು ಎಂದು ದಿನಾಂಕ ಗೊತ್ತಿಲ್ಲ. ಆದರೆ ಒಂದು ತಿಂಗಳು ಎಂದು ಸಾಕ್ಷಿ ಪುನಃ ನುಡಿಯುತ್ತಾರೆ. ನಾನು ದಿನಾಂಕಃ04.01.2019 ರಂದು ದೂರು ನೀಡಿರುತ್ತೇನೆ. 5 ನೇ ತಾರೀಖು ಪೊಲೀಸರು ಮಹಜರಿಗೆ ಬಂದ ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ. ನಾನು ಘಟನೆ ನಡೆದಿದ್ದ ದಿವನೇ ಊರಿಗೆ ಹೋಗಿದ್ದೆ. ಆಗ ನನ್ನ ತಾಯಿ ಬಂದಿದ್ದರು. ನಾನು ಪೊಲಿಸರಿಗೆ ಎತ್ತಿನ ಗಾಡಿ ತೋರಿಸಿರುವುದಿಲ್ಲ. ಪೊಲೀಸರು ಎತ್ತಿನಗಾಡಿ ಮತ್ತು ಭತ್ತ ದ ಬಗ್ಗೆ ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಆರ್.ಸಿ.ಸಿ. ಮನೆಯ ಮುಂಭಾಗದಲ್ಲಿ ಕಾಂಪೌಂಡ್ ಹಾಕಲಾಗಿದೆ ಎಂದರೆ ಸರಿ. ಸದರಿ ಮನೆಯ ಪಶ್ಚಿಮ ಹಾಗೂ ಉತ್ತರ ದಿಕ್ಕಿನಲ್ಲಿ ರಸ್ತೆ ಇರುತ್ತದೆ. ದಕ್ಷಿಣಕ್ಕೆ ಬುಡ್ಡೇಗೌಡರವರ ಅಣ್ಣನ ಮನೆ ಇರುತ್ತದೆ. ಆ ದಿನ ಎತ್ತಿನ ಗಾಡಿ ಹೊಡೆದುಕೊಂಡು ಹೋಗುವಾಗ ನಾನು, ಚಿಕ್ಕವರದೇಗೌಡ ಮತ್ತು ಕುಮಾರ ಇದ್ದೆವು.

ಸಾಕ್ಷಿಗೆ ಒಂದು ಪ್ರಶ್ನೆ ಕೇಳಿದರೆ ಇನ್ನೊಂದು ಉತ್ತರ ಹೇಳುತ್ತಾರೆ. ಆದ ಕಾರಣ ನ್ಯಾಯಾಲಯಕ್ಕೆ ಸಾಕ್ಷ್ಯ ವಿಚಾರಣೆ ಮಾಡಲು ಸಾಧ್ಯವಾಗದ ಕಾರಣ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.